ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್.ಸಿ. : 116/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಭವ್ಯ ಎನ್ ಆರ್ | ಪ್ರಮಾಣ ಮಾಡಿದ ದಿನಾಂಕ |
| ತಂದೆ ಹೆಸರು | : | ಕೆ ಎಸ್ ಹರೀಶ್ | **12.09.2023** |
| ವಯಸ್ಸು | : | 35 ವರ್ಷ | |
| ವೃತ್ತಿ | : | ಪಿ ಎಸ್ ಐ, ಸಿಟಿ ಸ್ಪೆಷಲ್ ಬ್ರ್ಯಾಂಚ್ , ಮೈಸೂರು | ಪಿ.ಡಬ್ಲೂ:15 |
| ವಾಸಸ್ಥಳ | : | ಮೈಸೂರು | ಸಿ.ಡಬ್ಲೂ: 30 |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

2018 ಸೆಪ್ಟೆಂಬರ್ ನಿಂದ ಮಾರ್ಚ್ 2020 ರವರೆಗೆ ನಜರಬಾದ್ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿ: 12.02.2019 ರಂದು ಪಿರ್ಯಾದುಧಾರರಾದ ನಂದಸಾಗರ ರಾಜು ಅರಸ್ ರವರು ಸಮಯ ಮಧ್ಯರಾತ್ರಿ 12.30 ಕ್ಕೆ ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ 40/2019 ಕಲಂ 302 ಸಹವಾಚಕ 34 ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ಘನ ನ್ಯಾಯಾಲಯಕ್ಕೆ ಮತ್ತು ಪ್ರತಿಗಳನ್ನು ಇಲಾಖಾ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಈಗ ಸದರಿ ದೂರನ್ನು ನಾನು ನೋಡಿದೆನು. ಅದರಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1 (ಬಿ) ಎಂದು ಗುರುತಿಸಲಾಯಿತು. ಎಪ್ ಐ ಆರ್ ಅನ್ನು ನಿಪಿ 18 ಎಂದು, ಸಾಕ್ಷಿಯ ಸಹಿಯನ್ನು ನಿಪಿ 18 (ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಠಾಣಾ ಆರಕ್ಷಕ ನೀರಿಕ್ಷಕರಾದ ಚಾಸಾ 31 ರವರಿಗೆ ನಿವೇದಿಸಿಕೊಂಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ನಂ. 2,4,5 ರಿಂದ 7 ಪರ ವಕೀಲರಾದ ಶ್ರೀ ಬಿ ಎಮ್ ಸಿ ರವರಿಂದಃ</u>**

3. ದೂರನ್ನು ಕೊಡುವಾಗ ಪಿರ್ಯಾಧಿ ಜೊತೆ ಬೇರೆ ಯಾರೂ ಬಂದಿರಲಿಲ್ಲ. ದೂರನ್ನು ಟೈಪ್ ಮಾಡಿಸಿಕೊಂಡು ಬಂದು ಕೊಟ್ಟರು. ನಾನು ಸುಳ್ಳ ದೂರನ್ನು ಪಡೆದುಕೊಂಡು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಎಪ್ ಐ ಆರ್ ಅನ್ನು ದಾಖಲೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಎಪ್ ಐ ಆರ್ ಗೂ ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**(ಉಳಿದ ಆರೋಪಿಗಳ ಪರ ವಕೀಲರು ಈ ಮೇಲಿನ ಆರೋಪಿಗಳ ಪರ ವಕೀಲರು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.)**

<u>ಮರು ವಿಚಾರಣೆಃ ಇಲ್ಲ</u>

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

12.09.2023
(ಜಿ.ಎಸ್. ಸಂಗ್ರೇಶಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.